ತುರಿಸುವ ಪ್ರೀತಿ ಹೆಚ್ಚಾಯಿತು. ದಾರಿಯಲ್ಲಿ ಎದುರು ಬದರಾಗುವ ರೈತರು, ಓಣಿಯ ಪರಿಚಿತ ಜನರು, ಈ ಮಕ್ಕಳ ಗುಂಪನ್ನು ನೋಡಿ, ಎಲ್ಲಿಗೆ ಹೊಂಟೀರಿ, ದಾರಿ ನೋಡಿಕೊಂಡು ಹೋಗಿ. ಹುಳ ಉಪ್ಪಡಿಗಳು ಇರ್ತಾವ. ಹೊಲದ ಬದುವಿನ ಕಡೆ ಹೋಗದೆ, ಸೀದಾ ದಾರಿಯಲ್ಲಿ ನಡೆದು ಹೋಗಿರೆಂಬ ತಿಳುವು ಹೇಳುತ್ತಾ ಹೋಗುತ್ತಿದ್ದರು.

ಶಾಲೆಯಲ್ಲಿನ ಪಾಠಕ್ಕಿಂತ ಪರಿಸರದ ಪಾಠ ಮಕ್ಕಳಿಗೆ ಬಹಳ ಹಿಡಿಸಿತು. ಸಸ್ಯಗಳ ಪುಟಾಣಿ ಗಿಡಗಳು, ದೊಡ್ಡಮರಗಳು, ಮರದಲ್ಲಿನ ಪೊಟರೆಗಳಲ್ಲಿ ಇರುವ ಮರಕುಟುಗ, ಪಾರಿವಾಳ, ಗುಬ್ಬಿ, ಕಾಗೆ, ಗಿಳಿ, ಗೊರವಂಕ, ರತ್ನಪಕ್ಷಿ, ಕೋಗಿಲೆಯ ಧ್ವನಿಯ ಆಲಿಸಿ, ಜಿಗಿದಾಡುತ ಮನದುಂಬಿಕೊಂಡರು. ಮಕ್ಕಳಿಗೆ ಹಾದಿಯಲ್ಲಿ ನಡೆದದ್ದು ದಣಿವೆನಿಸಲಿಲ್ಲ. ಮರಗಳ ತೋಪು ಕಂಡಾಗ ಅದರ ನೆರಳ ಅಡಿಯಲ್ಲಿ ಆಟ ಆಡುತ್ತ, ವೀಕ್ಷಿಸುತ್ತಾ, ಸಮಯದ ಪರಿವೇ ಮರೆತು ಹೋಗಿತ್ತು. ಹಸಿವಿನ ನೆನಪು ಕೂಡ ಬರಲಿಲ್ಲ.

ಅಕ್ಬರನ ಗೆಳೆಯರು ಇನ್ನು ಎಷ್ಟು ದೂರ ಎಂಬ ಪ್ರಶ್ನೆ ಮಾಡಿದರು. ಮುಂದಿನ ಹೊಲ ದಾಟಿದರೆ ನಮ್ಮ ಹೊಲ ಬರುತ್ತದೆ ಎಂದು. ಇಷ್ಟು ದೂರ ಬಂದಿದ್ದೇ ಇದೇ ಮೊದಲು. ಯಾವ ಬೇಸರ, ಆಯಾಸ, ಬಾಯಾರಿಕೆ, ಹಸಿವು, ಎಲ್ಲವೂ ಮರೆತ್ತಿತ್ತು. ಅಕ್ಬರನ ತಂದೆ ಹೊಲದಲ್ಲಿ ಕೆಲಸ ಮಾಡುವುದ ಕಂಡಿತು. ಎಲ್ಲರೂ ಅವರಿದ್ದಲ್ಲಿಗೆ ಹೋಗಿ ಸಂತಸದ ಬುಗ್ಗೆಯಲ್ಲಿ ನಾವೆಲ್ಲ ನಡೆದುಕೊಂಡು ಬಂದೀವಿ. ಎಂದು ಕುಣಿಕುಣಿದು ಚಂದುಸಾಬರಿಗೆ ಹೇಳಿದವು. ಮಕ್ಕಳ ಪ್ರೀತಿಗೆ ಮನಸೋತ ಚಂದುಸಾಬರು ಮರದ ನೆರಳಿಗೆ ಕೂಡಿಸಿ ಕುಡಿಯಲು ನೀರು ಕೊಟ್ಟರು. ಹೊಲದಲ್ಲಿ ಮೆಕ್ಕೆಜೋಳದ ಹಾಲಗಾಳಿನ ತೆನೆ ತಂದು ತಿನ್ನಲು ಕೊಟ್ಟರು. ಮಕ್ಕಳೆಲ್ಲ ಮುಖ ಅರಳಿಸಿ ತೆನೆಯನ್ನು ಗಬಗಬನೇ ಸ್ಪರ್ಧೆಗೆ ಬಿದ್ದವರಂತೆ ತಿಂದರು. ಮತ್ತೆ ಹೊಲದ ಬದುವಿನಲ್ಲಿರುವ ಮರದ ಜೇನು ಬಿಡಿಸಿ ತಂದು ಎಲ್ಲರಿಗೂ ಎಲೆಯಲ್ಲಿ ಹಾಕಿ ತಿನ್ನಲು ಕೊಟ್ಟರು. ತಿನ್ನಿ ತಿನ್ನಿ ಎಂದು ಹೇಳಿ ಶೇಂಗಾ ಬಳ್ಳಿಕಾಯಿ ಬಿಟ್ಟಿರುವ ಬಲಿತ ಬಳ್ಳಿಯನ್ನು ಕಿತ್ತು ತೊಳೆದು ಅವನ್ನು ಬಿಡಿಸಿ ಮಕ್ಕಳ ಜೇಬುಗಳಿಗೆ ತುಂಬಿದರು. ಮಕ್ಕಳು ಅಕ್ಬರನನ್ನು ಅಪ್ಪಿ ಅವನ ತಂದೆ ಚಂದುಸಾಬರ ಕಾಲಿಗೆ ನಮಸ್ಕರಿಸಿದರು.

ಮತ್ತೊಮ್ಮೆ ನೀರು ತಂದು ಇನ್ನಷ್ಟು ಕುಡಿಯಿರಿ ಎಂದು ಹೇಳಿ, ಕುಡಿದಾದ ಮೇಲೆ ಹೊಲ, ಭತ್ತದಮಡಿ, ಹೆಸರು, ಹಲಸಂದೆ, ಶೇಂಗಾ, ಔಡಲ, ತರಕಾರಿ ಮಡಿ ತೋರಿಸಿ, ಬೀಜ ಬಿತ್ತನೆ ಮಾಡಿದರೆ ಹೀಗೆಲ್ಲಾ ಬೆಳೆಯಬಹುದು. ದಿನಾಲು ಕೆಲಸ ಮಾಡುವುದರಿಂದ ದೇಹದ ಆಲಸ್ಯ ದೂರಾಗುತ್ತದೆ. ನಿಮ್ಮೆಲ್ಲರ ಅಪ್ಪ ಅವ್ವರ ದುಡಿಯುವುದನ್ನು ನೋಡಬೇಕು. ಚೆಂದಾಗಿ ಶಾಲೆ ಕಲಿತು ಜಾಣರಾಗಿ. ರಜೆ ಇದ್ದಾಗ ಮಾತ್ರ ಹೊಲಕ್ಕೆ ಬರಬೇಕು. ಉಳಿದ ದಿನಗಳಲ್ಲಿ ಶಿಕ್ಷಣ ಕಲಿತು ಮನೆಗೆ, ಊರಿಗೆ, ನಾಡಿಗೆ, ದೇಶಕ್ಕೆ ದುಡಿಯಬೇಕೆಂದು ಮಕ್ಕಳಲ್ಲಿ ಉತ್ಸಾಹ ತುಂಬಿದರು. ಅಕ್ಬರ ಕರೆದೊಯ್ದ ಗೆಳೆಯರ ಪ್ರೀತಿ, ಭೂಮಿತಾಯಿಯ ಬೆಳೆ, ಅಲ್ಲಿನ ಹಸಿರು, ಜೇನು, ಚಂದುಸಾಬರ ಕಕ್ಕುಲತೆ ಮಕ್ಕಳನ್ನು ತುಂಬಾ ಪ್ರಭಾವಿಸಿತು. ಮನೆಗೆ ಬಂದ ಹುಡುಗರು, ಗೆಳೆಯ, ಅವನ ತಂದೆ, ದುಡಿಮೆಯ ಬಗ್ಗೆ, ತಾಯಿ ತಂದೆ ಅಜ್ಜ ಅಜ್ಜಿಗೆ ವಿವರಿಸಿದರು. ■






**ಕೌಸ್ತುಭ್ ಪುರಾಣಿಕ್**
2ನೇ ತರಗತಿ, ಶ್ರೀ ಕುಮಾರನ್ಸ್ ಚಿಲ್ಡ್ರನ್ ಹೋಮ್, ಬೆಂಗಳೂರು



**ವಿಭಾ ಟಿ.ಎಸ್.**
1ನೇ ತರಗತಿ, ಶ್ರೀವಾಣಿ ಪಬ್ಲಿಕ್ ಸ್ಕೂಲ್, ಬೆಂಗಳೂರು





**ಶ್ರೇಯಾ ಟಿ.ಎಚ್.ಎಂ.**
7ನೇ ತರಗತಿ, ಸಂತ ಮೈಕಲ್ ಶಾಲೆ, ಕೂಡ್ಲಿಗಿ

